# ಮಲೆನಾಡಿನ ನಮ್ಮೂರಂದ್ರೆ...



ನರಸಿಂಹರಾಜಪುರ ಪಟ್ಟಣ

**ದಟ್ಟ ಮಲೆನಾಡ ಗ್ರಾಮ್ಯ ಭಾಷೆಯ ಸೊಗಸಂತೂ ಅನನ್ಯರೀ, ಆದ್ರೆ, ನನ್ನ ಪುಟ್ಟ ಊರು 'ನರಸಿಂಹರಾಜಪುರ' ದಟ್ಟ ಅಲ್ದಿದ್ರೂ ತೆಳುಮಲ್ನಾಡ್ ಸಿರಿವಂತಿಕೆಯಲ್ಲಿ, ಆಡುಮಾತಿನ್ ಧಾಟೀಲಿ ವಿಶಿಷ್ಟವಾಗಿದೆ ಅನ್ನೋದು ಹೆಮ್ಮೆನೇ...**

■ ಎಸ್.ಪಿ. ವಿಜಯಲಕ್ಷ್ಮಿ

'ಹೋಗುವೆನು ನಾ, ಮಲೆಯನಾಡಿಗೆ, ಮಳೆಯಬೀಡಿಗೆ' ಇಂತಿಪ್ಪ ಕುವೆಂಪು ಅವರ ಈ ಗೀತೆ ಕೇಳ್ದೋರು, ಮಲೆನಾಡ ಹೆಸರು ಕೇಳ್ದೋರು ಭಾಳ ಜನ ಇರ್ತೀರಿ ಗೊತ್ತು, ವಿಶ್ವಕ್ಕೂ ಗೊತ್ತು; ಗೊತ್ತಿಲ್ಲದ ಯುವಜನತೆಯೂ ಉದ್ಯೋಗದ ಒತ್ತಡ, ಆಧುನಿಕ ಸೌಲಭ್ಯದಲ್ಲೂ ಬಳಲಿ, ಬೇಸರಾಗಿದೆ ನಗರಬೇಕು ಹಳ್ಳಿಯ ಆದರ ಅಂತ ಕಣ್ಣುಕ್ಕುವ ಮಲೆನಾಡ ಸಿರಿ ಕಣ್ತುಂಬಿಕೊಳ್ಳೋಕೆ ರೆಸಾರ್ಟ್ ಅನ್ನೋ ನಾಯಿಕೊಡೆಗಳ ಜಾಡನ್ನು ಅರಸಿ ಮಲೆನಾಡ ಆತಿಥ್ಯ ಕಾಣ್ತೆದಾರೆ ಅಲ್ವಾ?

ಹ್ಞೂಂ, 'ಮಲೆನಾಡು' ಅಂದ್ರೆ ಗುಡ್ಡಬೆಟ್ಟಗಳ ಹಸಿರು ಸೆರಗೂ ಹೌದ್ರೀ, ಕುಂಭದ್ರೋಣ ಮಳೆಯ ತವರೂ ಹೌದ್ರೀ. ಕರಾವಳಿ, ಬಯಲುಸೀಮೆಗಳ ನಡುವೆ ಹದವಾಗಿ ಅರಳಿ ಕೂತ ಈ ಚೆಲುವೆಯ ಮೈತುಂಬ ಸಿಂಗಾರದ ಬೊಟ್ಟುಗಳೇ ಹಸಿಹಸಿರಿನ ಬೆಟ್ಟಗುಡ್ಡ, ಜುಳುಜುಳು ಹೊಳೆ, ದಬದಬನೆ ಜಲಪಾತ, ಬಿಸಿಲ ತಡೆವ ದಟ್ಟ ಕಾಡು, ಗಂಧ, ಭತ್ತ, ತೆಂಗು, ಮಾವು, ಕಂಗು, ಬಾಳೆ, ಅಡಿಕೆ, ತೋಟ, ಹೊಲ, ಗದ್ದೆ, 'ಭೂಸಂಪತ್ತು' ಅಂತ ನಾವು ಏನು ಹೇಳ್ತೀವಿ ಅದೆಲ್ಲ ಸಿಕ್ಕುವ, ದಕ್ಕುವ ತಾಣವೂ ಹೌದ್ರೀ.

ದಟ್ಟ ಮಲೆನಾಡ ಗ್ರಾಮ್ಯ ಭಾಷೆಯ ಸೊಗಸಂತೂ ಅನನ್ಯರೀ, ಆದ್ರೆ, ನನ್ನ ಪುಟ್ಟ ಊರು 'ನರಸಿಂಹರಾಜಪುರ' ದಟ್ಟ (ಆಗಿತ್ತು ಒಂದು ಕಾಲ್ದಲ್ಲಿ, ಈಗ?) ಅಲ್ದಿದ್ರೂ ತೆಳುಮಲ್ನಾಡ್ ಸಿರಿವಂತಿಕೆಯಲ್ಲಿ, ಆಡುಮಾತಿನ್ ಧಾಟೀಲಿ ವಿಶಿಷ್ಟವಾಗಿದೆ ಅನ್ನೋದು ಹೆಮ್ಮೆನೇ ಕಣ್ರೀ.

'ಮಲೆನಾಡ ಹೆಣ್ಣ ಮೈಬಣ್ಣ ಬಲು ಚೆನ್ನ, ಆ ನಡು ಸಣ್ಣ...' ಹ್ಞಾಂ, ವಿಷ್ಣುವರ್ಧನ್–ಭವಾನಿ ನಿಮ್ ಕಣ್ಣೆದ್ರು ಕುಣಿದ್ರು ತಾನೇ? ನಾನು ನನ್ನೂರ ಬಿಟ್ಟು ಬೇರೆ ಊರಿಗೆ ಡಿಗ್ರೀ ಮಾಡಲು ಹೋದಾಗ, ಗೆಳತಿಯರು, 'ಏ, ನೀನೆಷ್ಟು ಬೆಳ್ಳಗಿದೀಯೇ, ಹೆಂಗೇ...?' ಕೇಳಿದ್ರು. ಸಿನಿಮಾ ಹಾಡು ನೆನಪಾಗಿ, 'ನೋಡ್ರೇ ಇದು ಮಲೆನಾಡ ಕೊಡುಗೆ ಇರ್ಬೋದು...' ತಮಾಷಿಗಂದೆ, ಒಬ್ಳು, 'ಮುಂದಿನ್ ಜನ್ಮ ಇದ್ರೆ ನಾನು ಮಲ್ನಾಡಲ್ಲೇ, ಅದೂ ನಿಮ್ಮೂರಲ್ಲೇ ಹುಟ್ಬೇಕು ಕಣೇ...' ಎಂದಿದ್ದು ನೆನಪಾಗತ್ರೀ ಹಾಗಂತ ಎಲ್ಲ ಕಡೆ ಎಲ್ಲಾ ಬಣ್ಣದೋರಿದ್ರೂ, ಮಲೆನಾಡಿನ ವಾತಾವರ್ಣಕ್ಕೆ ಹೀಗೊಂದು ಗುಣ ಇದ್ಯಂತೆ. ಆದ್ರೆ ಬರೀ ಬಣ್ಣ ಬಿಡ್ರೀ, ಅದೇನೂ ದೊಡ್ಡಲ್ಲ, ನಮ್ಮನೆಗೆ ಬರ್ತಿದ್ದ ರಂಗಿ ಇದ್ದಿಲ ಕಪ್ಪು, ಆದ್ರೆ, ಎಂಥಾ ಗುಣವಂತೆ, ಎದೆ ತುಂಬ ಮಾಗಿದ ಪ್ರೀತಿ ಅಂತೀರಿ.

ಒಂದ್ಸಲ ಹುಡುಗನೊಬ್ಬ ಅವಳನ್ನ ರೇಗಿಸಕ್ಕೆ,